'ತೀವ್ರ ಅಸಮಾನತೆ ಸಮಾಜಕ್ಕೆ ಮಾರಕ'

■ **ವಿಕ ಸುದ್ದಿಲೋಕ** ಬೆಂಗಳೂರು

ಯಾವುದೇ ವ್ಯವಸ್ಥೆಯಲ್ಲಿ ತೀವ್ರ ಅಸಮಾನತೆ ಇದ್ದರೆ ಅದು ಸಮಾಜಕ್ಕೆ ಮಾರಕ ಎಂದು ಕುವೆಂಪು ವಿವಿ ನಿವೃತ್ತ ಪ್ರಾಧ್ಯಾಪಕ ಡಾ. ರಾಜೇಂದ್ರ ಚೆನ್ನಿ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ವೇಳೆ ಅವರು ಮಾತನಾಡಿದರು.

''ಪ್ರಸ್ತುತ ಸಮಾಜದಲ್ಲಿ ಶೇ.1ರಷ್ಟು ವರ್ಗದವರು ಶೇ.50ರಷ್ಟು ಸಂಪತ್ತನ್ನು ಹೊಂದಿದ್ದಾರೆ. ಇದು ಸಮಾಜಕ್ಕೆ ಮಾರಕ,'' ಎಂದರು.

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಮಾತನಾಡಿ, ''ಸಂವಿಧಾನ ಪ್ರಜಾಪ್ರಭುತ್ವದ ತಳಹದಿ. ಪ್ರತಿಯೊಬ್ಬ ನಾಗರಿಕ [illegible] ಸಂವಿಧಾನದ ಸಾರಾಂಶಗಳನ್ನು ತಿಳಿದು ವ್ಯವಸ್ಥೆಗೆ ಪೂರಕವಾಗಿ ಸಮ ಸಮಾಜ ನಿರ್ಮಿಸುವುದು ಆದ್ಯ ಕರ್ತವ್ಯ,'' ಎಂದು ತಿಳಿಸಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ಡಾ. ಎಸ್.ವಿ. ಸುರೇಶ ಉದ್ಘಾಟಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ದಲಿತ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ ಕರ್ನಾಟಕ ವಿಭಾಗದ ಡಾ. ರಾಜ ನಾಯಕ್, ''ಯುವಜನತೆ ಕೆಲಸ ನೀಡುವವರಾಗಬೇಕೇ ಹೊರತು ಕೆಲಸ ಪಡೆಯುವವರಾಗಬಾರದು,'' ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿವಿ ಶಿಕ್ಷಣ ನಿರ್ದೇಶಕ ಡಾ. ಕೆ. ಸಿ. ನಾರಾಯಣಸ್ವಾಮಿ, ಕುಲಸಚಿವ ಡಾ. ಬಸವೇಗೌಡ, ವಿಸ್ತರಣಾ ನಿರ್ದೇಶಕ ಡಾ. ವಿ.ಎಲ್. ಮಧುಪ್ರಸಾದ್ ಉಪಸ್ಥಿತರಿದ್ದರು.

03-06-2023
V-karanataka Pg 08

ICAR - CENTRAL INSTITUTE FOR COTTON RESEARCH
(Indian Council of Agricultural Research)
Regional Station, Coimbatore - 641 003

WALK - IN - INTERVIEW

Walk In Interview is scheduled for the selection of temporary position of Young Professional II on 15th June 2023,
For details please visit our website : www.cicr.org.in

03-06-2023
Ind Exp Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

ನೀರಿಲ್ಲದಿದ್ದರೂ ಬದುಕಬಲ್ಲ ಹೊಸ ಸಸ್ಯಗಳ ಶೋಧ

ಸದಾ ಜೀವಂತ ಈ 62 ಸಸ್ಯ!

ಹೊಸದಿಲ್ಲಿ: ತೀವ್ರ ನಿರ್ಜಲೀಕರಣವನ್ನು ತಡೆದುಕೊಳ್ಳುವ ಸಾಮರ್ಥ್ಯದಿಂದಾಗಿ ನೀರಿನ ಅವಶ್ಯಕತೆ ಇಲ್ಲದೆ ಬದುಕಬಲ್ಲ 62 ಹೊಸ ಜಾತಿಯ ಸಸ್ಯಗಳನ್ನು ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ. ಹೊಸದಾಗಿ ಪತ್ತೆಯಾದ ಸಸ್ಯಗಳು ಕೃಷಿಯಲ್ಲಿ, ವಿಶೇಷವಾಗಿ ನೀರಿನ ಕೊರತೆಯಿರುವ ಪ್ರದೇಶಗಳಲ್ಲಿಯೂ ಸಮೃದ್ಧವಾಗಿ ಬೆಳೆಯಬಹುದು ಎಂದು ಸಂಶೋಧಕರು ಹೇಳಿದ್ದಾರೆ. ಸಂಶೋಧನೆಗೆ ಸಂಬಂಧಿಸಿದ ಮಾಹಿತಿಯನ್ನು ನಾರ್ಡಿಕ್ ಜರ್ನಲ್ ಆಫ್ ಬಾಟನಿಯಲ್ಲಿ ಪ್ರಕಟಿಸಲಾಗಿದೆ.

ಈ ಸಸ್ಯಗಳು ಎಂತಹ ಬರಗಾಲದಲ್ಲಿಯೂ ಬದುಕಬಲ್ಲವು. ವಿಶೇಷವಾಗಿ ಈ ಸಸ್ಯಗಳು ನೀರಿನ ಲಭ್ಯತೆ ಇಲ್ಲದೆ ಇದ್ದಾಗ ಸಂಪೂರ್ಣ ಕಾರ್ಯಚಟುವಟಿಕೆ ಸ್ಥಗಿತಗೊಳಿಸುತ್ತವೆ. ಯಾವಾಗ ನೀರು ಲಭ್ಯವಾಗುತ್ತದೋ ಆಗ ಮತ್ತೆ ಬೆಳೆಯಲು ಆರಂಭಿಸುತ್ತವೆ. ಆದ್ದರಿಂದ ಬರಪೀಡಿತ ಪ್ರದೇಶಗಳಲ್ಲಿ ಕೃಷಿಗೆ ಪೂರಕವಾಗಿ ಈ ಸಸ್ಯಗಳನ್ನು ಬೆಳೆಸಬಹುದು.



ಪತ್ತೆ ಮಾಡಿದ್ದು ಯಾರು?

ಪುಣೆಯ ಅಘರ್ಕರ್ ಸಂಶೋಧನಾ ಸಂಸ್ಥೆಯ (ಎಆರ್‌ಐ) ಸಂಶೋಧಕರ ತಂಡವು ಈ ಸಸ್ಯಗಳನ್ನು ಪತ್ತೆಮಾಡಿದೆ. ಹೊಸತಾಗಿ ಪತ್ತೆಯಾಗಿರುವ 62 ಸಸ್ಯಗಳ ಪೈಕಿ 16 ಸಸ್ಯಗಳು ಭಾರತದ ಅಲ್ಲಲ್ಲಿ ಕಂಡುಬರುತ್ತವೆ. ಇನ್ನು 12 ಪಶ್ಚಿಮಘಟ್ಟದಲ್ಲಿ ಮಾತ್ರ ಕಂಡುಬಂದಿವೆ.

ಪರಿಸರಕ್ಕೆ ಮಹತ್ವದ ಕೊಡುಗೆ

ಇಂತಹ ಸಸ್ಯಗಳ ಕುರಿತ ಅಧ್ಯಯನ ಈವರೆಗೆ ದೇಶದಲ್ಲಿ ಬಹಳ ಕಡಿಮೆ ನಡೆದಿತ್ತು. ಸಾಮಾನ್ಯವಾಗಿ ಪಶ್ಚಿಮಘಟ್ಟಗಳ ಬಂಡೆಗಳ ನಡುವೆ ಸಸ್ಯಗಳು ಬೆಳೆಯುವುದು ವಿಶೇಷವಲ್ಲ. ಆದರೆ ಹೀಗೆ ನೀರಿಲ್ಲದೆ ಬದುಕುವ ಸಸ್ಯಗಳ ಬಗ್ಗೆ ಸಂಶೋಧನೆ ಆಗಿರಲಿಲ್ಲ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಹೇಳಿದೆ. ಈ ಶೋಧ ಜೀವವೈವಿಧ್ಯ ಮತ್ತು ಪರಿಸರಕ್ಕೆ ಬಹಳ ಮಹತ್ವ ಕೊಡುಗೆ ನೀಡಿದೆ ಎಂದು ಸಚಿವಾಲಯ ಹೇಳಿದೆ.

06-06-2023
Hosadiganta Pg 01

06-06-2023
V-karanataka Pg 05

ಕೇಂದ್ರ ಸರಕಾರ 6 ಸಾವಿರ ರೂ. ಜತೆಗೆ 4 ಸಾವಿರ ರೂ. ನೀಡಿದ್ದ ರಾಜ್ಯ ಬಿಜೆಪಿ ಸರಕಾರ

ಪಿಎಂ ಕಿಸಾನ್‌ಗೆ ಮುಂದುವರಿಯುವುದೇ ಸಹಕಾರ?

■ ಬ್ರಹ್ಮಾನಂದ ಎ. ನಿಡಗುಂದಾ ಕಲಬುರಗಿ
bhrahmanand.arali@timesgroup.com

ಪ್ರಧಾನಮಂತ್ರಿ ಮಹತ್ವಕಾಂಕ್ಷಿ ಯೋಜನೆಯಾದ ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಗೆ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಕಾರ ಮುಂದುವರಿಯುತ್ತಾ ಅಥವಾ ಇಲ್ಲವಾ ಎಂಬ ಗೊಂದಲ ರೈತ ವಲಯದಲ್ಲಿ ಕಾಡುತ್ತಿದೆ.

ಪಿಎಂ ಕಿಸಾನ್ ಯೋಜನೆಯಡಿ ಕೇಂದ್ರ ಸರಕಾರ ಪ್ರತಿ ರೈತರಿಗೆ ವರ್ಷದಲ್ಲಿ ಮೂರು ಬಾರಿ ಎರಡು ಸಾವಿರ ರೂ.ಯಂತೆ 6 ಸಾವಿರ ರೂ. ನೀಡುತ್ತಿತ್ತು. ಯೋಜನೆ ಪ್ರಾರಂಭವಾದಾಗ ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರಕಾರವು 4 ಸಾವಿರ ರೂ. ನೀಡಲಿದೆ ಎಂದು ಘೋಷಿಸಿದ್ದಲ್ಲದೆ, ಕಳೆದ ಕಂತಿನವರೆಗೆ ಬಿಜೆಪಿ ಸರಕಾರ ನೀಡಿತ್ತು.

ಏನಾಗಿದೆ ಈಗ: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಿದೆ. ಈ ವೇಳೆ ಬಿಜೆಪಿ ಸರಕಾರದ ಎಲ್ಲ ಯೋಜನೆಗೆ ತಡೆ ಹಾಕುವ ಕೆಲಸ ಮಾಡಿದೆ. ಈ ವರ್ಷದ ಮುಂದಿನ ಬಾರಿ ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಕಂತು ನೀಡುವಾಗ ರಾಜ್ಯ ಸರಕಾರದ ಕಂತು ಬರುತ್ತದೋ ಇಲ್ಲವೋ ಎಂಬ ಚರ್ಚೆ ಎಲ್ಲೆಡೆ ನಡೆಯುತ್ತಿದೆ.

ಕೇಂದ್ರದಿಂದ 13 ಕಂತು: ದೇಶದಲ್ಲಿ ಪ್ರತಿ ರಾಜ್ಯದ ರೈತರಿಗೆ ಅನುಕೂಲ ಆಗುವಂತೆ ಪ್ರಧಾನಿ ಮೋದಿ ವರ್ಷದಲ್ಲಿ ಮೂರು ಬಾರಿ 2000 ರೂ. ನೀಡಿದ್ದಾರೆ. ಈವರೆಗೆ ಸುಮಾರು 13 ಕಂತು ನೀಡಿದ್ದಾರೆ. ಇದೀಗ 14ನೇ ಕಂತಿನ ಹೊಸ್ತಿಲಲ್ಲಿದೆ.



ರಾಜ್ಯದಲ್ಲಿ 51.94 ಲಕ್ಷ ಫಲಾನುಭವಿಗಳು

ಪಿಎಂ ಕಿಸಾನ್ ಯೋಜನೆಯ ದಾಖಲಾತಿ ಪ್ರಕಾರ ರಾಜ್ಯದಲ್ಲಿ ಸುಮಾರು 58.92 ಲಕ್ಷ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಆದರೆ, ಅದರಲ್ಲಿ 51.94 ಲಕ್ಷ ಫಲಾನುಭವಿಗಳಿಗೆ 13ನೇ ಕಂತಿನ ಹಣ ದೊರಕಿದೆ. ರಾಜ್ಯದ ನೋಂದಣಿಯಾದ ಶೇ.88 ಫಲಾನುಭವಿಗಳು ಹಣ ಪಡೆದಿದ್ದಾರೆ.

ಪ್ರತಿ ಕಂತಿಗೆ 1038 ಕೋಟಿ ರೂ.

ರಾಜ್ಯ ಸರಕಾರ ಪಿಎಂ ಕಿಸಾನ್ ನಿಧಿ ಯೋಜನೆಯ ಪ್ರತಿ ಕಂತಿಗೆ ಸುಮಾರು 1,038.88 ಕೋಟಿ ರೂ. ಖರ್ಚು ಮಾಡುತ್ತಿದೆ. ಅದರಂತೆ ವರ್ಷವೊಂದಕ್ಕೆ 2,077 ಕೋಟಿ ರೂ. ಖರ್ಚು ಮಾಡುತ್ತಿದೆ. ಸದ್ಯದ ಕಾಂಗ್ರೆಸ್ ಸರಕಾರ ಐದು ಗ್ಯಾರಂಟಿ ಯೋಜನೆ ಜಾರಿ ಮಾಡಲು ಸರಕಾರ ಖರ್ಚು ವೆಚ್ಚಗಳ ಮೇಲೆ ಕಣ್ಣಿಟ್ಟಿದೆ. ಇದರಿಂದ ವರ್ಷಕ್ಕೆ 2,100 ಕೋಟಿ ರೂ. ಉಳಿತಾಯ ಆಗುವುದು ಎಂಬ ಯೋಚನೆ ಕಾಂಗ್ರೆಸ್ ಸರಕಾರ ನಾಯಕರಲ್ಲಿ ಬಂದರೆ ವರ್ಷಕ್ಕೆ ರೈತರಿಗೆ ರಾಜ್ಯ ಸರಕಾರದಿಂದ ನೀಡುತ್ತಿರುವ 4 ಸಾವಿರ ರೂ. ಗೋವಿಂದ ಆಗಲಿದೆ ಎನ್ನುವ ಮಾತು ಕೇಳಿ ಬರುತ್ತಿವೆ.

ಪಿಎಂ ಕಿಸಾನ್ ಯೋಜನೆ ಕರ್ನಾಟಕ ಮಾಹಿತಿ

- ರಾಜ್ಯದಲ್ಲಿ 58.92 ಲಕ್ಷ ಫಲಾನುಭವಿಗಳ ನೋಂದಣಿ
- ರಾಜ್ಯದ 51.94 ಲಕ್ಷ ಫಲಾನುಭವಿಗಳು
- ವರ್ಷಕ್ಕೆ ಎರಡು ಕಂತು ನೀಡುತ್ತಿದ್ದ ಬಿಜೆಪಿ ಸರಕಾರ
- ಪ್ರತಿ ಕಂತಿಗೆ 1,038.88 ಕೋಟಿ ರೂ. ಖರ್ಚು
- ಎರಡು ಕಂತು ಸೇರಿದರೆ 2,077 ಕೋಟಿ ರೂ. ಖರ್ಚು

ಮಳೆಯಿಂದ ಚಿಗುರಿದ ಹಸಿ ಹುಲ್ಲು | ಹಾಲು ಉತ್ಪಾದನೆಯಲ್ಲಿ ಏರಿಕೆ

ಚರ್ಮಗಂಟು ಬಳಿಕ ಮತ್ತೆ ಕ್ಷೀರ ಕ್ರಾಂತಿ

■ ಚೇತನ್ ಬೇಲೇನಹಳ್ಳಿ ಚಿಕ್ಕಮಗಳೂರು
chethan.bp@timesgroup.com

ರಾಜ್ಯದಲ್ಲಿ ಜನವರಿ-ಫೆಬ್ರವರಿ ತಿಂಗಳಲ್ಲಿ ಜಾನುವಾರುಗಳಲ್ಲಿ ಕಾಣಿಸಿಕೊಂಡಿದ್ದ ಚರ್ಮಗಂಟು ರೋಗದಿಂದ ಕುಂಠಿತಗೊಂಡಿದ್ದ ಹಾಲು ಉತ್ಪಾದನೆಯಲ್ಲಿ ಈಗ ಏರಿಕೆ ಕಂಡು ಬಂದಿದೆ.

ಭಾರೀ ಪ್ರಮಾಣದಲ್ಲಿ ಹರಡಿದ್ದ ಚರ್ಮಗಂಟು ರೋಗದಿಂದ ಜಾನುವಾರುಗಳು ತತ್ತರಿಸಿದ್ದವು. ಲಸಿಕೆ ವಿಳಂಬವಾದ ಕಾರಣ ಸಾವಿರಾರು ಜಾನುವಾರುಗಳು ಮೃತಪಟ್ಟಿದ್ದವು. ಸೋಂಕು ತಗುಲಿದ ಜಾನುವಾರುಗಳಲ್ಲಿ ಏಕಾಏಕಿ ಹಾಲಿನ ಪ್ರಮಾಣ ಕಡಿಮೆಯಾಗಿದ್ದಲ್ಲದೆ ಸೋಂಕು ತಗುಲಿದ ಜಾನುವಾರುಗಳ ಹಾಲು ಬಳಸಲು ಯೋಗ್ಯವಲ್ಲದ ಕಾರಣ ರಾಜ್ಯದಲ್ಲಿ ಹಾಲಿನ ಉತ್ಪಾದನೆ ಇಳಿಮುಖವಾಗಿತ್ತು.

ಕೆಎಂಎಫ್ ಅಂಕಿ ಅಂಶಗಳ ಪ್ರಕಾರ ದೈನಂದಿನ ಸರಾಸರಿ 82ರಿಂದ 92 ಲಕ್ಷ ಲೀಟರ್ ಉತ್ಪಾದನೆಯಾಗುತ್ತಿದ್ದ ಹಾಲಿನ ಪ್ರಮಾಣ ಚರ್ಮಗಂಟು ಉಲ್ಬಣಗೊಂಡ ಸಂದರ್ಭ 72 ಲಕ್ಷ ಲೀಟರ್‌ಗೆ ಇಳಿಕೆಯಾಗಿತ್ತು. ಈಗ ಮತ್ತೆ ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳವಾಗಿದ್ದು ಪ್ರತಿದಿನ ಸರಾಸರಿ 82 ಲಕ್ಷ ಲೀಟರ್ ಉತ್ಪಾದನೆಯಾಗುತ್ತಿದೆ.

82 ಲಕ್ಷ ಲೀಟರ್ ರಾಜ್ಯದಲ್ಲಿ ಪ್ರತಿದಿನ ಸರಾಸರಿ ಉತ್ಪಾದನೆಯಾಗುತ್ತಿರುವ ಹಾಲು



ರೈತರಿಗೆ ಸಿಗದ ಪರಿಹಾರ

ರಾಜ್ಯದಲ್ಲಿ 31,783 ಜಾನುವಾರುಗಳು ಚರ್ಮಗಂಟು ರೋಗದಿಂದ ಮೃತಪಟ್ಟಿದ್ದು 25 ಸಾವಿರ ಬೆಲೆ ಮೇಲ್ಪಟ್ಟ ಜಾನುವಾರು ಮಾಲೀಕರಿಗೆ ಪರಿಹಾರ ಸಿಕ್ಕಿಲ್ಲ. ಅದೇ ರೀತಿ ಜಿಲ್ಲೆಯಲ್ಲಿ 869 ಜಾನುವಾರುಗಳು ಸಾವನ್ನಪ್ಪಿದ್ದು, 451 ಜಾನುವಾರುಗಳ ಮಾಲೀಕರಿಗೆ ಮಾತ್ರ ಪರಿಹಾರ ಸಿಕ್ಕಿದೆ. 418 ಜಾನುವಾರುಗಳ ಮಾಲೀಕರಿಗೆ ಪರಿಹಾರ ಲಭ್ಯವಾಗಿಲ್ಲ.

ಚಿಗುರಿದ ಹಸಿ ಮೇವು ಹಾಲು ಉತ್ಪಾದನೆ ಕುಂಠಿತಗೊಳ್ಳಲು ಹಸಿ ಮೇವಿನ ಕೊರತೆ ಸಹ ಕಾರಣ. ಮಳೆಗಾಲ, ಚಳಿಗಾಲದಲ್ಲಿ ರೈತರು ಜಾನುವಾರುಗಳನ್ನು ಗೋಮಾಳ, ಜಮೀನಿನ ಹತ್ತಿರ, ಬೆಟ್ಟ-ಗುಡ್ಡಗಳಲ್ಲಿ ಹಸಿರು ಮೇವು ಮೇಯಿಸುತ್ತಾರೆ. ಬೇಸಿಗೆಯಲ್ಲಿ ಹಸಿ ಮೇವು ಲಭ್ಯವಾಗುವುದಿಲ್ಲ. ಇದು ಸಹ ಹಾಲು ಉತ್ಪಾದನೆ ಕಡಿಮೆಯಾಗಲು ಕಾರಣವಾಗಿತ್ತು. ಜತೆಗೆ ಈ ಬಾರಿ ಬಯಲು ಭಾಗದಲ್ಲಿ ಒಣ ಮೇವಿನ ಕೊರತೆಯೂ ಉಂಟಾಗಿತ್ತು. ಆದರೆ, ಕಳೆದೊಂದು ತಿಂಗಳಿಂದ ಆಗಾಗ ಬರುತ್ತಿರುವ ಮಳೆಯಿಂದಾಗಿ ಬೆಟ್ಟ-ಗುಡ್ಡ, ಗೋಮಾಳ ಹಾಗೂ ಬಯಲು ಪ್ರದೇಶಗಳಲ್ಲಿ ಹಸಿರು ಹುಲ್ಲು ಚಿಗುರಿರುವುದು ಮೇವಿನ ಕೊರತೆ ನೀಗಿಸಿದೆ.

ಕಾಫಿನಾಡಲ್ಲೂ ಚೇತರಿಕೆ

ಮಲೆನಾಡು, ಅರೆ ಮಲೆನಾಡು, ಬಯಲು ಭಾಗವನ್ನು ಒಳಗೊಂಡಿರುವ ಜಿಲ್ಲೆಯಲ್ಲಿ ಹೈನುಗಾರಿಕೆ ನಂಬಿಕೊಂಡು ಬಹಳಷ್ಟು ಕುಟುಂಬಗಳು ಜೀವನ ಸಾಗಿಸುತ್ತಿವೆ. ಇಂತಹ ಕುಟುಂಬಗಳ ಮೇಲೆ ಚರ್ಮಗಂಟು ರೋಗ ವ್ಯತಿರಿಕ್ತ ಪರಿಣಾಮ ಬೀರಿತ್ತು. ಜಿಲ್ಲೆಯಲ್ಲಿ 1,70,324 ಹೈನುಗಾರರಿದ್ದು ತಿಂಗಳಿಗೆ ಸರಸಾರಿ 32.25 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತದೆ. ಆದರೆ, ರೋಗದ ಸಂದರ್ಭ 28 ಲಕ್ಷ ಲೀಟರ್‌ಗೆ ಕುಸಿದಿತ್ತು. ಜನವರಿ ತಿಂಗಳಲ್ಲಿ 30,79,733 ಲೀಟರ್, ಫೆಬ್ರವರಿಯಲ್ಲಿ 28,25,646 ಲೀಟರ್ ಉತ್ಪಾದನೆಯಾಗಿತ್ತು. ಕಾಯಿಲೆ ನಿಯಂತ್ರಣದ ಬಳಿಕ ಮಾರ್ಚ್ ತಿಂಗಳಲ್ಲಿ 32,80,828 ಲೀಟರ್ ಉತ್ಪಾದನೆಯಾಗಿದೆ.

06-06-2023
V-karanataka Pg 01

Heat and drought threat for wheat

The world is getting hotter, causing shifts in seasonal patterns and increasing the amount of extreme weather, which can affect crop yields and food supplies. A recent study led by a researcher at the Friedman School of Nutrition Science and Policy at Tufts University has found that the likelihood of extreme temperatures that could affect crop yields has increased significantly in wheat-producing regions of the U.S. and China.

The findings predict heat waves that happened approximately once every hundred years in 1981 are now likely to happen once every six years in the Midwestern US and once every 16 years in Northeastern China. The work shows the range of conditions that people need to prepare for, even if they haven't occurred yet.

"The historical record is no longer a good representation of what we can expect for the future," said Erin Coughlan de Perez, Dignitas Associate Professor at the Friedman School and lead author on the paper published on June 2 in *Climate and Atmospheric Science*.

According to the most recent report from the Intergovernmental Panel on Climate Change, the average global surface temperature in the last decade was 1.1 degrees Celsius higher than it was between 1850 and 1900. To evaluate how this has changed our risk of extreme weather, Coughlan de Perez and her colleagues collected a large group of seasonal forecasts from the past 40 years.



They used this ensemble to generate thousands of possible variations in temperature and rainfall, essentially showing all the things that could have happened in a given year.

Winter wheat crops start growing in the fall and are harvested the following summer. High temperatures in spring, when the plant is flowering, can affect the wheat's development.

Record-breaking heat is also associated with record-breaking drought. The combination of these two hazards could severely impact the growing season. Both the US and China are considered global breadbaskets—areas that produce significant amounts of the world's grains. If these crops were to fail simultaneously, it could have serious impacts on the price and availability of food around the world.

- Phys.org

06-06-2023
Dec Hrd Pg 09

06-06-2023
V-karanataka Pg 01

ಬೇಕಿದೆ ಗುಣಮಟ್ಟ ಅಧ್ಯಯನ-ಕೆಸಿ ವ್ಯಾಲಿ ನೀರಿನ ಬಗ್ಗೆ ಶಂಕೆ

ರೈತರಿಗೆ ಟೊಮೆಟೊ ಗುಣಮಟ್ಟ ಹೊಡೆತ

■ ವೆಂ.ಸುನೀಲ್ ಕುಮಾರ್
ಕೋಲಾರ
sunil.kumar14@timesgroup.com

ಬೆಂಗಳೂರಿಗೆ ಹೊಂದಿಕೊಂಡಿರುವ ಜಿಲ್ಲೆಗಳ ಟೊಮೆಟೊ ಗುಣಮಟ್ಟ ನಿರಂತರವಾಗಿ ಕುಸಿಯುತ್ತಿದ್ದು, ಹಣ್ಣಿಗೆ ಬೇಡಿಕೆ ಇಲ್ಲದೇ ರೈತರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಈ ಸಮಸ್ಯೆ ನಿವಾರಣೆಗೆ ಸರಕಾರ ಕೂಡಲೇ ತಜ್ಞರ ತಂಡದಿಂದ ಅಧ್ಯಯನ ನಡೆಸಿ ಸಮಸ್ಯೆಗೆ ತುರ್ತು ಪರಿಹಾರ ರೂಪಿಸಬೇಕಿದೆ.

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಟೊಮೆಟೊ ಬೆಳೆದು ರಫ್ತು ಮಾಡಲಾಗುತ್ತಿದೆ. ಆದರೆ, ಎರಡು ವರ್ಷಗಳಿಂದ ಯಾವುದೇ ಟೊಮೆಟೊ ತಳಿ ಬೆಳೆದರೂ ಹಣ್ಣಿನ ಗುಣಮಟ್ಟ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪರಿಣಾಮ, ವರ್ತಕರು ಟೊಮೆಟೊ ಹಣ್ಣು ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಸೂಕ್ತ ಬೆಲೆ ಸಿಗದೆ ರೈತರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ.

ಜೀವ ತುಂಬಿದ್ದ ಕೆಸಿ, ಎಚ್‌ಎನ್ ವ್ಯಾಲಿ

ಕೆಸಿ ವ್ಯಾಲಿ ಹಾಗೂ ಎಚ್‌ಎನ್ ವ್ಯಾಲಿ ಯೋಜನೆ ಮೂಲಕ ಎರಡು ಜಿಲ್ಲೆಗಳ ಕೆರೆಗಳಿಗೆ ನೀರು ತುಂಬಿಸಲಾಗಿದ್ದು, ಅಂತರ್ಜಲ ವೃದ್ಧಿಯಾಗಿ ಕೊಳವೆಬಾವಿಗಳು ಜೀವ ಪಡೆದುಕೊಂಡಿದ್ದವು. ಹೀಗಾಗಿ ರೈತರು ಕೃಷಿಯಲ್ಲಿ ಉತ್ತಮ ಲಾಭ ಪಡೆಯಲು ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಟೊಮೆಟೊ ಬೆಳೆದರೂ ಸೂಕ್ತ ಬೆಲೆ ಸಿಗುತ್ತಿಲ್ಲ.

ಗುಣಮಟ್ಟ ಕುಸಿತ, ರೈತರಿಗೆ ನಷ್ಟ

ಟೊಮೆಟೊ ಗುಣಮಟ್ಟ ಕುಸಿತಕ್ಕೆ ಕಾರಣವೇನು ಎಂಬುದನ್ನು ತಿಳಿಯುವ ಗೋಜಿಗೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮುಂದಾಗಿಲ್ಲ. ವಾತಾವರಣದಲ್ಲಿನ ಬದಲಾವಣೆ, ತೀವ್ರ ಕೀಟ ಬಾಧೆ, ವೈರಸ್ ಹರಡುವಿಕೆ, ಕೆಸಿ ವ್ಯಾಲಿ ನೀರಿನಿಂದಾಗಿ ಹಣ್ಣಿನ ಗುಣಮಟ್ಟ ಕುಸಿದಿದೆ ಎಂಬ ಹಲವಾರು ವಾದಗಳನ್ನು ರೈತರು ಹಾಗೂ ವ್ಯಾಪಾರಸ್ಥರು ಮುಂದಿಟ್ಟಿದ್ದಾರೆ.

ಅಧ್ಯಯನಕ್ಕೆ ತಜ್ಞರ ತಂಡ ನೇಮಕಕ್ಕೆ ಆಗ್ರಹ



ಟೊಮೆಟೊ ಬೆಳೆ ಗುಣಮಟ್ಟ ಕುಸಿಯಲು ಕಾರಣವೇನು ಎಂಬುದನ್ನು ತಿಳಿಯಲು ಕೂಡಲೇ ಸರಕಾರ ತಜ್ಞರ ತಂಡ ರಚನೆ ಮಾಡಬೇಕಿದೆ. ಆ ಮೂಲಕ ಗುಣ ಮಟ್ಟದ ಕುಸಿತಕ್ಕೆ ಕಾರಣಗಳನ್ನು ತಿಳಿದು ಅದಕ್ಕೆ ಪರಿಹಾರ ಮಾರ್ಗಗಳನ್ನು ರೈತರಿಗೆ ತಿಳಿಸುವಂತಹ ಕೆಲಸ ಆದ್ಯತೆ ಮೇಲೆ ಆಗಬೇಕಿದೆ ಎನ್ನುತ್ತಾರೆ ಟೊಮೆಟೊ ಬೆಳೆಗಾರರು.

ಗುಣಮಟ್ಟ ಹೇಗಿದೆ?

- ಟೊಮೆಟೊ ಹಣ್ಣಿನ ಮೇಲ್ಭಾಗ ಅತ್ಯಂತ ತೆಳು
- ಕೊಯ್ಲು ಮಾಡಿದ 30 ಗಂಟೆಗಳಲ್ಲಿ ಹಾಳು
- ಹಣ್ಣಿನ ಬಣ್ಣ ಸರಿಯಾಗಿ ಬರುತ್ತಿಲ್ಲ
- ಕಾಯಿಯ ಆಕಾರ ವಕ್ರ



- ವಾತಾವರಣದಲ್ಲಿನ ಬದಲಾವಣೆ, ಆಕಾಲಿಕ ಮಳೆ, ಕೀಟ ಬಾಧೆಯಿಂದಾಗಿ ಎಪಿಎಂಸಿಗೆ ಮಾರುಕಟ್ಟೆಗೆ ಬರುವ ಗುಣಮಟ್ಟದ ಟೊಮೆಟೊ ಇಳಿಕೆಯಾಗಿದೆ. ನಿರಂತರವಾಗಿ ನಷ್ಟ ಅನುಭವಿಸಿದ ಕಾರಣದಿಂದ ಮಾರುಕಟ್ಟೆಗೆ ಬರುವ ಟೊಮೆಟೊ ಬೆಳೆ ಪ್ರಮಾಣವೂ ತಗ್ಗಿದೆ.

-ವಿಜಯಲಕ್ಷ್ಮೀ
ಕಾರ್ಯದರ್ಶಿ, ಕೋಲಾರ ಎಪಿಎಂಸಿ

- ಜಿಲ್ಲೆಯ ಕೆರೆಗಳಿಗೆ ಕೆಸಿ ವ್ಯಾಲಿ ನೀರು ಹರಿದ ಬಳಿಕ ಟೊಮೆಟೊ ಬೆಳೆ ಗುಣಮಟ್ಟ ಕಳೆದುಕೊಂಡಿದೆ. 36 ಗಂಟೆಯೊಳಗೆ ಹಣ್ಣು ಕೊಳೆಯುತ್ತಿದೆ. ಇದರಿಂದ ಹೊರ ರಾಜ್ಯಗಳಿಗೆ ಹಣ್ಣು ಕಳಿಸಲು ಕಷ್ಟವಾಗುತ್ತಿದೆ.

-ಸಿಎಂಆರ್ ಶ್ರೀನಾಥ್
ಟೊಮೆಟೊ ಮಂಡಿ ಮಾಲೀಕರು ಹಾಗೂ ಬೆಳೆಗಾರರು

ಖರೀದಿಗಾಗಿ ಬೇರೆಡೆ ಹೊರಟ ವರ್ತಕರು

ಕೋಲಾರ ಎಪಿಎಂಸಿ ಮಾರುಕಟ್ಟೆ ಏಷ್ಯಾದಲ್ಲಿಯೇ 2ನೇ ಅತಿದೊಡ್ಡ ಟೊಮೆಟೊ ಮಾರುಕಟ್ಟೆ ಹೆಗ್ಗಳಿಕೆಯನ್ನು ಪಡೆದಿದೆ. ಆದರೆ, ಕಳೆದೆರಡು ವರ್ಷಗಳಿಂದ ಗುಣಮಟ್ಟ ಬೆಳೆ ಮಾರುಕಟ್ಟೆಗೆ ಬರುವುದು ಕಡಿಮೆಯಾದ ಹಿನ್ನೆಲೆಯಲ್ಲಿ ಹೊರ ರಾಜ್ಯಗಳ ವರ್ತಕರು ಬೇರೆ ಮಾರುಕಟ್ಟೆಗಳ ಕಡೆಗೆ ಹೋಗುತ್ತಿರುವುದು ಆತಂಕ ಮೂಡಿಸಿದೆ. ಕೋಲಾರ ಮಾರುಕಟ್ಟೆಗೆ ಬರುವ ಟೊಮೆಟೊ ಖರೀದಿಸಲು ಸುಮಾರು 100-120 ವರ್ತಕರು ಈ ಹಿಂದೆ ಬರುತ್ತಿದ್ದರು. ಈಗ ಆ ಸಂಖ್ಯೆ 65-70ಕ್ಕೆ ಬಂದಿದೆ. ವರ್ತಕರು ಚಿತ್ರದುರ್ಗ, ಚಳ್ಳಕೆರೆ, ಅನಂತಪುರ, ಮದನಪಲ್ಲಿ ಸೇರಿದಂತೆ ಇತರೆ ಮಾರುಕಟ್ಟೆಗಳ ಕಡೆಗೆ ಹೊರಟಿದ್ದಾರೆ.

These plant species can lose 95% water, yet survive

TIMES NEWS NETWORK

Pics: DST



BACK TO LIFE: Screenshots from a time-lapse video showing how one of the DT species revived after being watered in a period of 12 hours

Bengaluru: The Western Ghats, India's biodiversity hotspot, is home to 62 desiccation-tolerant (DT) vascular plant species. These species are able to withstand extreme dehydration, losing up to 95% of their water content, and revive themselves once water is available again, which could have applications in agriculture, particularly in areas with water scarcity, the department of science and technology (DST) has said. Fifty-three of the species are fresh discoveries.

53 DISCOVERED AT WESTERN GHATS

This unique ability (to handle extreme dehydration) allows them to survive in harsh, arid environments that would be uninhabitable for most other plants. DT plants have been studied for their possible applications in agriculture, particularly in areas with limited water resources. "...In tropical regions, they are the predominant occupants of rock outcrops. In India, DT plants have been relatively understudied. Although rock outcrops are common landscapes in Western Ghats, knowledge of DT plants in the region is poor," the DST said.

A recent study by scientists from Agharkar Research Institute (ARI), Pune, an autonomous institute of the department, has identified 62 DT species in Western Ghats, many more than the earlier known nine species. They have time-lapse video that records the hydration process of these species.

> "...In tropical regions, they are the predominant occupants of rock outcrops. In India, DT plants have been relatively understudied. Although rock outcrops are common landscapes in Western Ghats, knowledge of DT plants in the region is poor
>
> — Dept of science & tech

"The team led by Mandar Datar and involving Smrithy Vijayan, Aboli Kulkarni and Bhushan Shigwan collaborated with Dr Stefan Porembski from Rostock University Germany, who is recognised as an expert of tropical rock outcrops," DST said.

It added that the findings of the study can provide valuable insights into the biodiversity and ecology of Western Ghats and aid in the conservation of DT plant species. Besides, understanding the mechanisms by which DT plants can tolerate dehydration could lead to the development of crops that are more drought-resistant and require less water.

The research, published in the Nordic Journal of Botany, provides an overview of Indian DT plants, with a special focus on the Western Ghats, and includes an inventory of species with their habitat preferences, DST said, adding that of the inventory of 62 species, 16 are Indian endemic and 12 exclusive to the Western Ghats outcrops, highlighting the ghats' importance as a global DT hotspot.

In addition to rock outcrops, tree trunks in the partially shaded forests were also found to be crucial habitats for DT species, as per the study. Researchers scrutinised outcrop species for their DT properties by seasonal field observations, followed by relative water content estimation protocols.

'Fungi reflect Earth's incredible history — they power plant life but face human impacts now'

__Donald H. Pfister__ is professor of systematic botany and curator emeritus of the Farlow Library and Herbarium at Harvard University. Speaking to __Srijana Mitra Das__ at Times Evoke, he discusses the evolution and importance of the rich world of fungal flora:

What is the core of your research?

■ I work on fungi and a particular group in the class called Ascomycota.



I'm interested in the identities of fungi, who is related to whom, what their biology is and how we can use that knowledge. Earlier, we had only morphology or the study of structures. With the advent of molecular phylogenetics, we could expand the field.

I'm very interested in Pezizomycetes which include edible fungi like morels, tubers, truffles, etc. Our lab also studies fungi that trap nematodes or worms, powdery mildew or widespread plant parasites which are not particularly well-studied, insects, etc.

Why is it important to study fungi?

■ Given their relevance, fungi are actually very under-studied. The number of described species may be 1,50,000 — but scientific estimates based on the diversity known in other organisms like plants, animals and microbes actually place that number from between one and a half million to seven million species. This rich world is quite poorly understood.

Yet, fungi interact with other organisms in important ways. Their relationships with roots are very beneficial as they pick up and move materials to plants which need these to grow. All forests depend on fungi in an underground mycorrhizal network that maintains healthy plants.

Fungi can also pose threats — many plant diseases are caused by these. A banana disease linked to fungi is extremely serious. Coffee can be infected by a fungus which limits its production and the areas it can be grown in. Chocolate, wheat and other crops are also vulnerable. I haven't even mentioned the human diseases linked to fungi but these are only some reasons we need to study them. There couldn't be a more pressing time either as all fungi are now being affected by climate change — as this happens, species that may have been non-detrimental could be triggered to harmful actions now.

iStock



NATURE'S RECYCLER: Trichaptum biforme can decompose hardwood

iStock



How are fungi distributed globally?

■ Many are quite specific in their associations — as one moves from biome to biome or from a broad-leaf forest to a coniferous wood, you'll find many different kinds. Within those biomes too, there are micro-habitats — a biome gets divided into sub-habitats, depending on nutrient availability, other organisms' presence, etc. So, in terms of diversity, we find both broad patterns and narrow niches in which some fungi exist.

How does habitat loss impact fungi?

■ I've researched temperate forests in South America, especially Chile and Argentina. With farming, forestry and introducing species for plantations, habitats have been tremendously altered here. These forests held fascinating fungi though. An example is cyttaria whose nearest relatives are in Australia and New Zealand. This fungi is linked to Earth's incredible history itself — as continents were formed and separated, some of these plants and fungi moved to other areas. As this hadn't been studied much, we didn't know the full extent of such connections. Now, with habitat loss, we're at the edge of studying these areas and species — and making these discoveries.

Interestingly, in 1906, Roland Thaxter, a Harvard mycologist, travelled to the temperate forests of Chile. He wrote a diary of his findings and collections — these specimens then returned to Harvard. When I read the diary later, I found the specimens unique. This stimulated our ark of going back to the same forests. In 2010, we found many of the same fungi. But we could also see the forests had changed tremendously over time — as they were cut, burned, grazed and reforested, the trees used to reforest were not the original ones. There were now pines brought in from North America, eucalyptus from Australia, etc. Such habitat change is crucial, particularly for the habitat niches within biomes. Also, partly because of climate change and the pressures on forests, Chile is seeing many more forest fires. These are also changing habitats — we don't even know how effective fungi will be in regeneration.

What is the most surprising fungi you have seen so far?

■ Each fungus carries its own story. Somebody had to first find and collect it, then study and name it and others also researched it later, gradually expanding our range of knowledge. I find that process of history and documentation fascinating. In my own work, there was a fungus described from Bermuda in the 1920s, associated with a Bermuda feeder, a unique local species. An introduced insect attacked the feeder which significantly declined — it was assumed the fungus also perished. But through our molecular studies, we found that lineage was present in the eastern part of the United States. That discovery was special — it felt like bringing an assumed-to-be-extinct being back into the world.

iStock



UNUSUAL BLOOMS: Mushrooms, some being edible, hold the spores of fungi

READERS WRITE

Dear Times Evoke,

Every Saturday, TOI's Evoke brings tremendous hope that there are such distinguished people globally who are so engaged with nature. I'm an IB educator in a reputed school. Times Evoke gives wonderful perspectives and I often use it for classroom discussions. This time, Bulbul Sharma (27th May) outlining how our connection with nature requires time to simply spend observing ecology quietly was so relevant. I believe 'Nature doesn't need us, we need Nature'. TOI Evoke proves this beautifully every week!

—Ms Anita Mahendra Kapadia, Mumbai

What lovely TE articles on nature and memories! It's even more urgent to be grateful for nature. Happiness, health, creativity, these are just some boons it gives. We must work to save it. Thank you for wonderful TE, TOI!

Dr Samridhya Moitra, Kolkata

I'm a huge fan of Times Evoke! What I love best is TE's data and facts. The table showcasing Shakespeare, Frida Kahlo and Kalidasa was fantastic! Sent a snap to my family group. Great learning with nice presentation!

Arun Bhandari, Delhi

TE's interview with Fiona Stafford was highly educative. Nature is inextricably interwoven with human life and its influence is tremendous. Stafford must be appreciated for her deep understanding. Thank you for such excellent perspectives, TE.

Rajarao Kumar, Bengaluru

Dear TE, you are just awesome! Thanks for putting my favourite 'Name, Place, Animal, Thing' so beautifully! I enjoyed seeing the orange Baltimore oriole, the brown Dartmoor ponies and the Bengal Tiger! We should see him from faaar away only!

Sagari, 7 years, Baroda

Share your thoughts at:
timesevoke@timesgroup.com
Read Times Evoke online at:
www.timesofindia.indiatimes.com/india/times-evoke

06-06-2023
Times of Ind Pg 10

50000 ರೂ. ಗಡಿ ದಾಟಿದ ರಾಶಿ ಅಡಕೆ

ಹೊಳೆಹೊನ್ನೂರು (ಶಿವಮೊಗ್ಗ): ಐದಾರು ತಿಂಗಳಿನಿಂದ ಇಳಿಮುಖವಾಗಿದ್ದ ಅಡಕೆ ಬೆಲೆ ಜೂನ್ ಮೊದಲ ವಾರದಲ್ಲೇ ಏರಿಕೆಯತ್ತ ಮುಖ ಮಾಡಿದೆ. ವಿಧಾನಸಭೆ ಚುನಾವಣೆಗೆ ಒಂದೆರಡು ತಿಂಗಳು ಬಾಕಿ ಇರುವಾಗಲೇ ಇಳಿಮುಖದತ್ತ ಸಾಗಿದ ಅಡಕೆ ಬೆಲೆ ಚುನಾವಣೆ ಘೋಷಣೆ ನಂತರ ನಿರೀಕ್ಷೆಗೂ ಮೀರಿ ಕುಸಿತ ಕಂಡಿತು. ರಾಶಿ ಅಡಕೆ ಕ್ವಿಂಟಾಲ್‌ಗೆ 42 ಸಾವಿರದಿಂದ 44 ಸಾವಿರ ರೂ. ದಾಖಲಿಸಿ ಅಡಕೆ ಬೆಳೆಗಾರರ ನಿದ್ದೆಗೆಡಿಸಿತು.



ವಾಡಿಕೆಯಂತೆ ಖೀಣಿ ಸಮಯದಲ್ಲಿ ಅಡಕೆ ಬೆಲೆ ಏರಿಕೆಯಾಗುವುದು ಮಾಮೂಲಿ. ಆದರೆ ಈ ಬಾರಿ ಖೀಣಿಗೆ ಒಂದೆರಡು ತಿಂಗಳು ಬಾಕಿ ಇರುವಾಗಲೇ ಬೆಲೆ ಏರಿಕೆಯಾಗುತ್ತಿದೆ. ಸದ್ಯ ಮಾರುಕಟ್ಟೆಯಲ್ಲಿ ಕ್ವಿಂಟಾಲ್ ರಾಶಿ ಅಡಕೆ ಬೆಲೆ 48,000-50,010 ರೂ. ಇದೆ. ಆದರೆ ಗ್ರಾಮೀಣ ಕೈ ವ್ಯಾಪಾರಸ್ಥರು ಕ್ವಿಂಟಾಲ್‌ಗೆ 800-1,000 ಸಾವಿರ ರೂ. ಜಾಸ್ತಿ ನೀಡಿ ಅಡಕೆ ಖರೀದಿಗೆ ಮುಂದಾಗುತ್ತಿದ್ದಾರೆ. ಆದರೆ ಬಹುತೇಕ ಅಡಕೆ ಬೆಳೆಗಾರರ ಬಳಿ ಅಡಕೆಯೇ ಇಲ್ಲ.

06-06-2023
Vijayavani Pg 01